ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಶ್ರೀರಂಗಪಟ್ಟಣ
ಸಿ.ಸಿ. 526-2017

| | | | |
|---|---|---|---|
| ಸಾಕ್ಷಿಯ ಹೆಸರು | : ಗಣೇಶ | ಪ್ರಾ ಸಾ | : 01 |
| ತಂದೆ/ಗಂಡನ ಹೆಸರು | : ಹೆಚ್ ರಾಮಯ್ಯ | ಚಾ ಸಾ | : 03 |
| ವಯಸ್ಸು | : 53 ವರ್ಷ | | |
| ವೃತ್ತಿ | : ಶಿರಸ್ತೆದಾರರು ತಾಲ್ಲೂಕು ಕಛೇರಿ, ಪಾಂಡವಪುರ | | |
| ವಾಸಸ್ಥಳ | : ಪಾಂಡವಪುರ | | |

ಸಾಕ್ಷಿಗೆ ದಿನಾಂಕಃ 24.12.2021 ರಂದು ಪ್ರಮಾಣ ವಚನ ನೀಡಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎ ಪಿ ಪಿ ರವರಿಂದ

ನಾನು **2010** ರಿಂದ **2015** ರವೆರಗೆ ಅರಕೆರೆ ಹೋಬಳಿಯಲ್ಲಿ ಕಂದಾಯ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಆರೋಪಿತರು ಗೊತ್ತು.

ಚಾ ಸಾ **1** ರವರು ಗೊತ್ತು ಅವರು ಮಂಡ್ಯ ಹಿರಿಯ ಗಣಿ ಮತ್ತು ಭೂ ವಿಜ್ಞಾನಿ. ಚಾ ಸಾ **2** ಗೊತ್ತು ಶ್ರೀರಂಗಪಟ್ಟಣದ ತಹಶೀಲ್ದಾರ್ ರಾಗಿದ್ದರು. ಚಾ ಸಾ **4** ರವರು ಗೊತ್ತು ಜಕ್ಕನಹಳ್ಳಿಯ ಗ್ರಾಮ ಲೆಕ್ಕಾಧಿಕಾರಿಯಾಗಿದ್ದರು, ಚಾ ಸಾ **5** ರವರು ಗೊತ್ತು ಅರಣ್ಯ ಅಧಿಕಾರಿಯಾಗಿದ್ದರು. ಚಾ ಸಾ **6** ಗೊತ್ತು ಅರಣ್ಯ ರಕ್ಷಕರಾಗಿದ್ದರು. ಚಾ ಸಾ **7** ಗೊತ್ತು ಗ್ರಾಮ ಸಹಾಯಕರಾಗಿದ್ದರು. ಚಾ ಸಾ **8** ಗೊತ್ತು. ಹಿರಿಯ ಭೂ ವಿಜ್ಞಾನಿಯಾಗಿದ್ದರು.

ದಿ. **12.03.2015** ರಂದು ನಾನು ನನ್ನ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ತಾಲ್ಲೂಕು ಕಛೇರಿಯಿಂದ ದೂರವಾಣಿ ಕರೆ ಬಂದಿದ್ದು ಜಕ್ಕನಹಳ್ಳಿ, ಚನ್ನನಕೆರೆ, ಟಿ ಎಂ ಹೊಸೂರು, ಕಾಳೇನಹಳ್ಳಿ, ಗಣಂಗೂರು ಗ್ರಾಮಗಳಲ್ಲಿ ಅನಧೀಕೃತವಾಗಿ ಅಕ್ರಮವಾಗಿ ಪರವಾಣಿಗೆ ಇಲ್ಲದೆ ಗಣಿಗಾರಿಕೆ ಮಾಡುತ್ತಿರುವುದಾಗಿ ಮಾಹಿತಿ ಬಂದಿರುತ್ತದೆ. ನಂತರ

ನಾನು ತಾಲ್ಲೂಕು ಕಛೇರಿಗೆ ಬಂದು ಚಾ ಸಾ 1, 2, 4, 5, 7 ಹಾಗೂ ಪೋಲಿಸ್ ಸಿಬ್ಬಂದಿಗಳೊಂದಿಗೆ 2 ತಂಡಗಳನ್ನು ರಚನೆ ಮಾಡಿ 2 ವಾಹನದಲ್ಲಿ ಟಿ. ಎಂ ಹೊಸೂರು ಮಾರ್ಗವಾಗಿ ಜಕ್ಕನಹಳ್ಳಿ ಗ್ರಾಮದ ಸರ್ವೆ ನಂ. 83 ರಲ್ಲಿ ಒಟ್ಟು 160 ಎಕರೆ ಇದ್ದು ಸದರಿ ಜಮೀನಿಗೆ ಹೋಗಿ ಪರಶೀಲಿಸಲಾಗಿ ಸರ್ವೆ ನಂ. 83 ರಲ್ಲಿ 1ನೇ ಆರೋಪಿಯ ಹೆಸರಿನಲ್ಲಿ 20 ಗುಂಟೆ ಜಮೀನು ಇದ್ದು ಸದರಿ ಜಮೀನಿನಲ್ಲಿ ಅಕ್ರಮವಾಗಿ ಯಾವುದೇ ಪರವಾಣಿಗೆ ಇಲ್ಲದೆ ಗಣಿಗಾರಿಕೆ ಮಾಡುತ್ತಿರುವುದು ಕಂಡು ಬಂದಿತ್ತು. ನಾವು ಸ್ಥಳಕ್ಕೆ ಹೋದಾಗ ನಮ್ಮನ್ನು ನೋಡಿ ಗಣಿಗಾರಿಕೆ ನಡೆಸುತ್ತಿದ್ದ ವ್ಯಕ್ತಿಗಳು ಸ್ಥಳದಿಂದ ಓಡಿ ಹೋಗಿರುತ್ತಾರೆ. ಸದರಿ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ಮಾಡಿರುವ ಕುರುಹು ಇತ್ತು. ನಂತರ ನಾವುಗಳು ಸ್ಥಳದಲ್ಲಿ ಮಹಜರ್ ಕ್ರಮ ನಡೆಸಿದೆವು. ನಂತರ ಸರ್ವೆ ನಂ. 83/ಬಿ-16 ರಲ್ಲಿ ಒಟ್ಟು 1 ಎಕರೆ 19 ಗುಂಟೆ ಜಮೀನು ಇದ್ದು ಸದರಿ ಜಮೀನು 2ನೇ ಆರೋಪಿಯ ಹೆಸರಿನಲ್ಲಿ ಇದ್ದು ಸ್ಥಳಕ್ಕೆ ಹೋಗಿ ಪರಿಶೀಲಿಸಲಾಗಿ ಸ್ಥಳದಲ್ಲಿ ಗಣಿಗಾರಿಕೆ ಮಾಡಿದ ಬಗ್ಗೆ ಹಳ್ಳ ಹಾಗೂ ಕುರುಹುಗಳು ಇದ್ದವು. ಚಾ ಸಾ 1,2,4,5 ಹಾಗೂ ನಮ್ಮ ಎಲ್ಲಾ ಇಲಾಖಾ ಸಿಬ್ಬಂದಿಗಳ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತೇವೆ. ನಂತರ ಸರ್ವೆ ನಂ. 83-ಪಿ4 ರಲ್ಲಿ ಒಟ್ಟು 2 ಎಕರೆ 39 ಗುಂಟೆ ಇದ್ದು ಸದರಿ ಜಮೀನು 3 ಹಾಗೂ 4ನೇ ಆರೋಪಿಗೆ ಸೇರಿದ ಜಮೀನಾಗಿದ್ದು ಸದರಿ ಜಮೀನನ್ನು ಪರಿಶೀಲಿಸಲಾಗಿ ಸ್ಥಳದಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡಿದ ಬಗ್ಗೆ ಹಳ್ಳ ಹಾಗೂ ಕುರುಹುಗಳು ಇದ್ದವು. ನಂತರ ನಂತರ ಸರ್ವೆ ನಂ. 83-ಪಿ ರಲ್ಲಿ ಒಟ್ಟು 20 ಗುಂಟೆ ಇದ್ದು ಸದರಿ ಜಮೀನು 5ನೇ ಆರೋಪಿಗೆ ಸೇರಿದ ಜಮೀನಾಗಿದ್ದು ಸದರಿ ಜಮೀನನ್ನು ಪರಿಶೀಲಿಸಲಾಗಿ ಸ್ಥಳದಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡಿದ ಬಗ್ಗೆ ಹಳ್ಳ ಹಾಗೂ ಕುರುಹುಗಳು ಇದ್ದವು. ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತೇವೆ.

ಸಾಕ್ಷಿಗೆ ದಿ. 12.03.2015 ರ 4 ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರತಿಸಿದ್ದರಿಂದ ಸ್ಥಳ ಮಹಜರನ್ನು ನಿಪಿ 1 ರಿಂದ 4 ಎಂದು, ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 1 ಎ, ನಿಪಿ 2 ಎ, ನಿಪಿ 3 ಎ, ನಿಪಿ 4 ಎ ಎಂದು ಗುರುತಿಸಲಾಯಿತು.

ಸಾಕ್ಷಿಗೆ ದಿ. 18.03.2015 ರ 1 ನೇ ಆರೋಪಿಗೆ ಸೇರಿದ ಜಮೀನಿನಲ್ಲಿ ನಡೆಸಿದ ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರತಿಸಿದ್ದರಿಂದ ಸ್ಥಳ ಮಹಜರನ್ನು ನಿಪಿ 5 ಎಂದು, ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 5 ಎ ಎಂದು, ಗುರುತಿಸಲಾಯಿತು. 2 ನೇ ಆರೋಪಿಗೆ ಸೇರಿದ ಜಮೀನಿನಲ್ಲಿ ನಡೆಸಿದ ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರತಿಸಿದ್ದರಿಂದ ಸ್ಥಳ ಮಹಜರನ್ನು ನಿಪಿ 6 ಎಂದು, ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 6 ಎ ಎಂದು, ಗುರುತಿಸಲಾಯಿತು. 3 ನೇ ಆರೋಪಿಗೆ ಸೇರಿದ ಜಮೀನಿನಲ್ಲಿ ನಡೆಸಿದ ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರತಿಸಿದ್ದರಿಂದ ಸ್ಥಳ ಮಹಜರನ್ನು ನಿಪಿ 7 ಎಂದು, ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 7 ಎ ಎಂದು, ಗುರುತಿಸಲಾಯಿತು. 5 ನೇ ಆರೋಪಿಗೆ ಸೇರಿದ ಜಮೀನಿನಲ್ಲಿ ನಡೆಸಿದ ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರತಿಸಿದ್ದರಿಂದ ಸ್ಥಳ ಮಹಜರನ್ನು ನಿಪಿ 8 ಎಂದು, ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 8 ಎ ಎಂದು, ಗುರುತಿಸಲಾಯಿತು. ಸಾಕ್ಷಿ ನ್ಯಾ.ದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿರುತ್ತಾರೆ. ಈ ವಿಚಾರವಾಗಿ ನಾನು ತನಿಖಾಧಿಕಾರಿಗಳಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಈ ವಿಚಾರವಾಗಿ ಆರೋಪಿಗಳ ವಿರುದ್ದ ಚಾ ಸಾ 1 ರವರು ದೂರು ನೀಡಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ ಸಿ ಜಿ ವಕೀಲರಿಂದ</u>**

ನಮಗೆ ತಾಲ್ಲೂಕು ಕಛೇರಿಯಿಂದ ರಮೇಶ್ ಎಂಬುವವರು ಪೋನ್ ಮುಖಾಂತರ ಮಾಹಿತಿ ನೀಡಿರುತ್ತಾರೆ. ಮಾಹಿತಿ ಬಂದಾಗ ನಾನು ಅರಕೆರೆಯಲ್ಲಿ ಇದ್ದೆನು. ರಮೇಶ್ ರವರು ಮಾಹಿತಿ ನೀಡಿರುತ್ತಾರೆ ಎಂದು ಇದೇ ಮೊದಲ ಭಾರಿಗೆ ನಾನು ನ್ಯಾ.ದಲ್ಲಿ ಹೇಳಿರುತ್ತೇನೆ ಬೇರೆ ಎಲ್ಲಿಯೂ ಹೇಳಿಕೆ ನೀಡಿಲ್ಲ. ಮಾಹಿತಿ ಬಂದ ತಕ್ಷಣ ನಾನು ಅರಕೆರೆಯಿಂದ ಶ್ರೀರಂಗಪಟ್ಟಣಕ್ಕೆ ಬಂದಿರುತ್ತೇನೆ. ನಾನು ಶ್ರೀರಂಗಪಟ್ಟಣಕ್ಕೆ ಬರುವಾಗ ನಾನು ನನ್ನ ಕೆಲಸದ ಉಸ್ತುವಾರಿಯನ್ನು ಯಾರಿಗೂ ಸಹಾ ನೀಡಿಲ್ಲ. ನಮ್ಮ ಕಛೇರಿಯಿಂದ ನಾನು  ಶ್ರೀರಂಗಪಟ್ಟಣಕ್ಕೆ ಬರುವಾಗ ನಮ್ಮ ಕಛೇರಿಯ ದಿನಚರಿಯಲ್ಲಿ ನಮೂದು ಮಾಡಿಲ್ಲ. ನಾನೊಬ್ಬನೇ ನಮ್ಮ ಕಛೇರಿಯಿಂದ ಶ್ರೀರಂಗಪಟ್ಟಣಕ್ಕೆ ಬಂದಿರುತ್ತೇನೆ. ದಾಳಿಗೆ ಹೋಗಲು ನಮ್ಮ ಸಿಬ್ಬಂದಿಗಳು ಬಂದಿದ್ದು ಅವರುಗಳಲ್ಲಿ ಯಾರು ಎಲ್ಲಿಂದ ಬಂದಿರುತ್ತಾರೆ ಎಂದು ನಾನು ಮಾಹಿತಿ ಪಡೆದಿಲ್ಲ. ನಾನು ಚಾ ಸಾ 1,2,4 ರವರು ತಹಶೀಲ್ದಾರ್ ರವರ ಜೀಪಿನಲ್ಲಿ ಹೋಗಿರುತ್ತೇವೆ ಉಳಿದ ಸಿಬ್ಬಂದಿಗಳು ಗಣಿ ಇಲಾಖಾ ಜೀಪಿನಲ್ಲಿ ಬಂದಿರುತ್ತಾರೆ. 2 ಜೀಪುಗಳಿಗೆ ನಮ್ಮನ್ನು ಹೊರತುಪಡಿಸಿ ಚಾಲಕರು ಇದ್ದರು. ಜೀಪುಗಳನ್ನು ಚಲಾಯಿಸುತ್ತಿದ್ದ ಚಾಲಕರ ಹೆಸರನ್ನು ನಮ್ಮ ವರದಿಯಲ್ಲಾಗಲಿ ಮಹಜರ್ ನಲ್ಲಾಗಲಿ ನಮೂದಿಸಿಲ್ಲ ಎಂದರೆ ಸರಿ. 2 ಜೀಪುಗಳ ಸಂಖ್ಯೆ ನನಗೆ ಈಗ ನೆನಪಿಲ್ಲ.

ನಿಪಿ 1 ರಿಂದ 4 ರಲ್ಲಿ ಚೆಕ್ ಬಂದಿಯನ್ನು ನಮೂದಿಸಿಲ್ಲ ಎಂದರೆ ಸರಿ. ನಿಪಿ 1 ರಿಂದ 4 ನ್ನು ಬರೆದವರ ಷರಾ ಇಲ್ಲ ಎಂದರೆ ಸರಿ. ನಿಪಿ 1 ರಿಂದ 4 ನ್ನು ನಾನು ಬರೆದಿರುತ್ತೇನೆ. ನಾನು ಬರೆದಿರುತ್ತೇನೆ ಎಂದು ಷರಾ ಬರೆಯಲು ಯಾವುದೇ ತೊಂದರೆ ಇರಲಿಲ್ಲ. ಸ್ಥಳದಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದ ಬಗ್ಗೆ ಕಲ್ಲುಗಳು ಇದ್ದ

ಕುರುಹುಗಳು ಇತ್ತು ಎಂದು ಹೇಳಿದ್ದು, ಸದರಿ ಕಲ್ಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿ. ಸ್ಥಳದಲ್ಲಿ ಹಳ್ಳವಿದ್ದ ಬಗ್ಗೆ ಹಾಗೂ ಕಲ್ಲು ಇದ್ದ ಬಗ್ಗೆ ನಾವು ಯಾವುದೇ ನಕಾಶೆಯನ್ನು ತಯಾರಿಸಿಲ್ಲ. ದಾಳಿಗೆ ಹೋದ ನಮ್ಮ ಎಲ್ಲರ ಬಳಿ ಸ್ಮಾರ್ಟ್ ಫೋನ್ ಗಳಿದ್ದವು ಎಂದರೆ ಸರಿ. ಸ್ಥಳದಲ್ಲಿ ನಾವು ಭಾವಚಿತ್ರಗಳನ್ನು ತೆಗೆದಿರುತ್ತೇವೆ ಅದು ಈಗ ಎಲ್ಲಾ ನಾಶವಾಗಿದೆ. ಭಾವಚಿತ್ರಗಳನ್ನು ನಾವು ನ್ಯಾ.ಕ್ಕೆ ಹಾಜರುಪಡಿಸಿಲ್ಲ. ಭಾವಚಿತ್ರಗಳನ್ನು ನ್ಯಾ.ಕ್ಕೆ ಹಾಜರುಪಡಿಸಿಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

ನಾನು ಕಂದಾಯ ನಿರೀಕ್ಷಕನಾಗಿದ್ದರಿಂದ ನಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಪಹಣಿ ಪತ್ರಿಕೆಗಳ ಸರ್ವೆ ನಂಬರ್, ವಿಸ್ತೀರ್ಣ ಹಾಗೂ ಹೆಸರುಗಳ ಬಗ್ಗೆ ನನಗೆ ತಿಳಿದಿದೆ ಎಂದರೆ ಸರಿ. ದಾಳಿಗೆ ಹೋಗುವಾಗ ಅರಣ್ಯ ಇಲಾಖೆಯ ಸಿಬ್ಬಂದಿ ಹಾಗೂ ಪೋಲಿಸರು ಸಮವಸ್ತ್ರವನ್ನು ಧರಿಸಿದ್ದರು. ಸಾಕ್ಷಿ ನ್ಯಾ.ದ ಮುಂದೆ ಇರುವ ಆರೋಪಿಗಳನ್ನು ನೋಡಿ ನನಗೆ ಶಿವಮೂರ್ತಿ ಎಂಬ ಆರೋಪಿಯ ಹೆಸರು ಮಾತ್ರ ಗೊತ್ತು, ಉಳಿದ ಆರೋಪಿಗಳ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಇಂದು ನ್ಯಾ.ದಲ್ಲಿ 1,2,4,5 ಆರೋಪಿಗಳು ಮಾತ್ರ ಹಾಜರಿದ್ದು ನನಗೆ ಮೃತ 3 ನೇ ಆರೋಪಿಯ ಹೆಸರು ಗೊತ್ತಿಲ್ಲ. 4 ನೇ ಆರೋಪಿ ಊರಿನ ಗ್ರಾಮ ಪಂಚಾಯಿತಿ ಉಪಾಧ್ಯಾಕ್ಷರಾಗಿದ್ದು ಹಾಗೂ ರಾಜಕೀಯ ಮುಖಂಡರಾಗಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ನನ್ನ ವ್ಯಾಪ್ತಿಗೆ ಬರುವ ಗ್ರಾಮದ ರಾಜಕೀಯ ಮುಖಂಡರ ಹೆಸರು ನನಗೆ ಗೊತ್ತಿರುತ್ತದೆ ಎಂದರೆ ಸರಿ. ನಾವು ದಾಳಿಗೆ ಹೋಗುವ ಸಮಯದಲ್ಲಿ ಮಾರ್ಗದಲ್ಲಿ ಸಾಕಷ್ಟು ಸಾರ್ವಜನಿಕರು ಹಾಗೂ ಸ್ಥಳದ ಸುತ್ತ - ಮುತ್ತ ಸಾಕಷ್ಟು ಸಾರ್ವಜನಿಕರು ಇದ್ದರು ಎಂದರೆ ಸರಿ. ಸದರಿ ದಿನ ಪ್ರಸ್ತುತ ಪ್ರಕರಣವನ್ನು ಹೊರತುಪಡಿಸಿ ಹಲವಾರು ಪ್ರಕರಣಗಳನ್ನು ನಾವು

ದಾಖಲಿಸಿರುತ್ತೇವೆ ಎಂದರೆ ಸರಿ.

ದಿ. 12.03.2015 ರಂದು ಸ್ಥಳ ಮಹಜರ್ ಕ್ರಮ ಜರುಗಿಸಲು ಯಾವುದೇ ತೊಂದರೆ ಇರಲಿಲ್ಲ. ನಿಪಿ 5 ರಿಂದ 8 ನ್ನು ದಿ. 18.03.2015 ರಂದು ಜರುಗಿಸಿರುತ್ತೇವೆ. ನಿಪಿ 5 ರಿಂದ 8 ನ್ನು ಪೋಲಿಸರು ಬರೆದಿರುತ್ತಾರೆ. ನಿಪಿ 5 ರಿಂದ 8 ನ್ನು ಬರಹಗಾರರು ಬರೆದಿರುತ್ತಾರೆ ಹೆಸರು ನನಗೆ ಗೊತ್ತಿಲ್ಲ. ಸ್ಥಳ ಮಹಜರ್ ಕ್ರಮ ಜರುಗಿಸುವಾಗ ಭಾವಚಿತ್ರಗಳನ್ನು ನಾವು ತೆಗೆದಿರುತ್ತೇವೆ ಅದನ್ನು ನ್ಯಾ.ಕ್ಕೆ ಹಾಜರುಪಡಿಸಿಲ್ಲ. ಸ್ಥಳ ಮಹಜರ್ ಕ್ರಮ ಜರುಗಿಸುವಾಗ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿ. ಸ್ಥಳ ಮಹಜರ್ ಕ್ರಮ ಜರುಗಿಸುವಾಗ ಸ್ಥಳದಲ್ಲಿ ಸಾರ್ವಜನಿಕರು ಇದ್ದರು ಆದರೆ ಸಹಿ ಮಾಡಲು ಯಾರು ಸಹಾ ಒಪ್ಪಲಿಲ್ಲ. ಸ್ಥಳದಲ್ಲಿ ನಕ್ಷೆ ತಯಾರಿಸಲಿಲ್ಲ ಎಂದರೆ ಸರಿ. ನಾನು ದಿ. 17.03.2015 ರಂದು ಪೋಲಿಸ್ ಠಾಣೆಯಲ್ಲಿ ಬೆ. 11-12 ಗಂಟೆ ವರೆಗೆ ಹೇಳಿಕೆ ನೀಡಿರುತ್ತೇನೆ. ಹೇಳಿಕೆ ನೀಡಲು ಹೋಗುವಾಗ ನಾನು ಕಛೇರಿ ದಿನಚರಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಹೇಳಿಕೆ ನೀಡಲು ನಾನು, ಚಾ ಸಾ 1,4 ರವರು ಹೋಗಿರುತ್ತೇವೆ. ನಾವು ದಾಳಿಗೆ ನಮ್ಮ ಇಲಾಖಾ ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆ ಯಾರನ್ನು ಸಹಾ ಕರೆದುಕೊಂಡು ಹೋಗಿಲ್ಲ ಎಂದರೆ ಸರಿ. ನಾನು ದಾಳಿ ಮಾಡಲು ಸ್ಥಳಕ್ಕೆ ಹೋಗಲಿಲ್ಲ, ನಮ್ಮ ಹಿರಿಯ ಅಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರಿಂದ 8 ನ್ನು ಯಾವ ಸಮಯದಂದು ಬರೆದು ಯಾವ ಸಮಯಕ್ಕೆ ಮುಕ್ತಾಯ ಮಾಡಿರುತ್ತೇನೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. ನನಗೆ ದಾಳಿಯ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಸ್ಥಳದಲ್ಲಿ ಸ್ಥಳ ಮಹಜರ್ ಕ್ರಮ ಜರುಗಿಸಿದದಿದ್ದರು ಆರೋಪಿಗಳ ವಿರುದ್ಧ ಮೇಲಾಧಿಕಾರಿಗಳ ಮಾತು ಕೇಳಿ ಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಆರೋಪಿ ಗ್ರಾಮದ

ಮುಖಂಡನಾಗಿದ್ದರಿಂದ ಆತನ ಹೆಸರನ್ನು ಮಾತ್ರ ಹೇಳಿರುತ್ತೇನೆ, ಉಳಿದವರು ಹೆಸರು ನನಗೆ ಗೊತ್ತಿಲ್ಲ, ಅವರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಕಛೇರಿಯ ಅಂಕಿ ಅಂಶಗಳಿಗೋಸ್ಕರ ಆರೋಪಿಗಳ ವಿರುದ್ದ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಂದಾಯ ನಿರೀಕ್ಷಕನಾಗಿದ್ದರಿಂದ ಪಹಣಿ ಪತ್ರಿಕೆಗಳಲ್ಲಿ ನನಗೆ ಹೆಚ್ಚಿನ ಜ್ಞಾನ ಇರುವುದರಿಂದ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರಿಂದ 4 ರಲ್ಲಿ ಅವುಗಳನ್ನು ಬರೆದ ಸಮಯವನ್ನು ನಮೂದಿಸಿಲ್ಲ ಎಂದರೆ ಸರಿ. ಪ್ರಸ್ತುತ ಪ್ರಕರಣಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲದಿದರೂ ವಿನಾಕಾರಣ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳೆಲ್ಲರೂ ವ್ಯವಸಾಯಗಾರರಾಗಿದ್ದು ಯಾವುದೇ ಗಣಿಗಾರಿಕೆ ಮಾಡುತ್ತಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ. ಓ. ಹೇ. ಸ. ಒ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ.